ಹೋದಳು. ಆದರೆ ಮಾದನಿಗೆ ಆ ಹುಡುಗಿ ತನ್ನನ್ನು 'ಶಿಲ್ಪಿ' ಅಂದಿದ್ದು ಮಾತ್ರ ಕಿವಿಯೊಳಗೆ ಇಳಿದು ಮುದಗೊಳಿಸಿತ್ತು. ಉಮೆ ಆಗಾಗ ಮೈಲಿಗೆ ಬಟ್ಟೆ ಹೊತ್ತು ತಂದು ತೊಳೆದು ಅಲ್ಲಿಯೇ ಒಣಗಿಸುವ ನೆಪದಲ್ಲಿ ಹೊತ್ತು ಕಳೆಯಲು ಗೆಳತಿಯರೊಂದಿಗೆ ಬಂದು ಮಾದ ಮಾಡುವ ಕಾಯಕ ನೋಡುತ್ತಾ ನಿಲ್ಲೋಳು. 'ಗಣಪತಿ ವೈನಾಗೇತೆ. ಏಳು ಹೆಡೆ ಸರ್ಪ ಎದ್ದು ಬರಂಗೈತೆ' ಅಂತ ವರ್ಣನೆ ಮಾಡೋಳು. ಒಳಗೆ ಹೆದರುತ್ತಾ ಮಾದನೂ ಅವಳೆಡೆ ನೋಡೋನು. ಒಂದಿನ ಬಂದ ಉಮೆ 'ಅಯ್! ಪುಟ್ಟ ಶಿವಲಿಂಗ ಮಸ್ತು ಅದೆ ಕಣ್ರೆ' ಅಂತ ಹಿರಿಹಿರಿ ಹಿಗ್ಗಿದಳು. 'ಯಾವುದು?' ಇವನೂ ಈಟಗಲ ಬಾಯಿಬಿಟ್ಟ. ಅವಳು ಬೆರಳೆತ್ತಿ ತೋರಿದಳು. 'ತಗಳಿ' ಮಾದ ಎತ್ತಿ ಕೊಟ್ಟುಬಿಟ್ಟ. 'ಅಯ್ಯಯ್ಯೋ ನಾನು ರೊಕ್ಕ ತಂದಿಲ್ಲಪ್ಪೋ' ಇವಳ ಹಿಂಜರಿಕೆ. 'ಇರ್ಲಿ ತಗಳಿ... ಕೊಡೀರಂತೆ' ಇವನ ಉಪಚಾರ. ಅವಳು ಮುಜಗರಿಸಿದಾಗ, 'ಇರ್ಲಿ ತಕ್ಕಳವ್ವಾ' ಹೊರಬಂದ ರಾಮಕ್ಕಳೂ ಪ್ರೀತಿ ತೋರಿದಳು. ಹಿಂಗೆ ಶಿವಲಿಂಗ ಉಮೆಯ ದೇವರ ಮನೆ ಕೋಣೆಯನ್ನಲಂಕರಿಸಿತ್ತು.

ಇನ್ನೊಮ್ಮೆ ಉಮೆ ಬಂದು ದುಡ್ಡು ಕೊಡಲು ನಿಂತಾಗ, 'ನಮ್ಮವ್ವ ನಿಮ್ತಾವ ದುಡ್ಡು ತಗಬ್ಯಾಡ ಅಂದೇತೆ... ಬ್ಯಾಡ್ರಿ' ಅಂದ ಮಾದ ಬೂಸಿಬಿಟ್ಟ. ಅವಳೂ ಬಲವಂತ ಮಾಡಲಿಲ್ಲ. ಉರಿಬಿಸಿಲ ಇನ್ನೊಂದು ದಿನ ರಾಮಕ್ಕ ಮಗನಿಗೆ ಪಾನಕದ ಬಟ್ಟಲು ತಂದಿಡೋದಕ್ಕೂ ಉಮೆ ಗೆಳತಿಯರ ದಂಡಿನೊಂದಿಗೆ ಬರೋದಕ್ಕೂ ಸರಿಹೋಯ್ತು. ಮಾದ ಸಂಕೋಚದಿಂದಲೇ ಬಟ್ಟಲು ಎತ್ತಿಕೊಂಡ. 'ಮಾದ, ಭಾಳ ಬಿಸಿಲೈತಪಾ. ನಮಗೆ ಪಾನಕ ಕೊಡಲ್ವಾ?' ಅಂದಳು ಉಮೆ. ಇವನೋ ತಬ್ಬಿಬ್ಬು. 'ನಮ್ಮಂಥೋರ ಮನೆಯಾಗೆ ನೀವೆಲ್ಲಾ!?...' ಮಾದ ಭೂಮಿಗಿಳಿದ. 'ಯಾಕೆ? ನೀವೂ ನಮ್ಮಂಗೆ ಮನುಷ್ಯರೆಯಾ. ಕೊಟ್ರೆ ಕುಡಿದೇನು' ಉಮೆ ಅಂದಾಗ ರಾಮಕ್ಕ ನಿಂತಲ್ಲೇ ಬೆವರೊಡೆದಳು. 'ಅಯ್ಯಯ್ಯೋ! ನಮಗೆ ಬೇಡಕಣೆ' ಗೆಳತಿಯರು ಹೆದರಿ ಬಾಯಿ ಮಾಡಿದರು. 'ನಂಗೆ ಕೊಡಿ ರಾಮಕ್ಕ' ಉಮೆ ಬಂಡೆಯೊಂದರ ಮೇಲೆ ಕೂತೇಬಿಟ್ಟಳು. ರಾಮಕ್ಕಳ ಜೀವ ಬಾಯಿಗೆ ಬಂತು. ಒಳ ಹೋದ ರಾಮಕ್ಕ ಹೆಚ್ಚೇ ಏಲಕ್ಕಿಪುಡಿ ಬೆರಸಿ ನಿಂಬೆರಸ ಹಿಂಡಿ ಬಿಳಿಬೆಲ್ಲ ಕುಟ್ಟಿ ಹಾಕಿ ಸೋಸಿ ತಾವೇ ಎಂದೂ ಕುಡಿಯದಂತಹ ತಾಜಾ ಪಾನಕ ತಯಾರಿಸಿ ತಂದಿಟ್ಟಳು. ಉಮೆ ಸಾವಧಾನವಾಗಿ ಕಣ್ಣುಮುಚ್ಚಿ ಹೀರುವಾಗ ಯಾರಾದರೂ ನೋಡಿಯಾರೆಂಬ ಅಳುಕಲ್ಲಿ ಗೆಳತಿಯರು ಅವಳ ಸುತ್ತ ನಿಂತು ನೆರಿಕೆ ಕಟ್ಟಿದರು.

ಮತ್ತೊಂದು ದಿನ ಹಿಂಗಾತು. ಫಳಫಳ ಮಿರುಗುವ ರುದ್ರಾಕ್ಷಿಯೊಂದನ್ನು ಮಾದನಿಗೆ ಉಮೆ ತಂದುಕೊಟ್ಟು, 'ಇದನ್ನು ಕೊರಳಾಗೆ ಕಟ್ಟಿಕೋ ಒಳ್ಳೇದಾಗುತ್ತೆ' ಅಂದಳು. ಅವನದನ್ನು ರಾಮಕ್ಕಳ ಕೈಗೆ ಹಾಕಿದ. ಗೂಡಿನಾಗಿದ್ದ ಕೆಂಪುದಾರ ತೆಗೆದು ಪೋಣಿಸಿ ಮಗನ ಕೊರಳಿಗೆ ರುದ್ರಾಕ್ಷಿ ಹಾಕಿ ಸೀರೆ ಸೆರಗಿನಿಂದ ತೆಗೆದಳು. ನಿಂಗನೂ ಆಗೀಗ ಉಮೆಯನ್ನು ಗಮನಿಸಿದ್ದ. 'ಅಯ್ಯೋ ದಡ್ಡಮುಂಡೇವಾ. ಆಕಿ ಯಾರಂಡ್ಕಂಡೀರ? ಊರಿಗೇ ದೊಡ್ಡ ಯಾಪಾರಿ ಇಟಗೇರ ಬಸಯ್ಯನ ಮಗಳು. ಅವರ ಮನೆಯಾಗೆ ಬಂಗಾರದ ಇಟ್ಟಿಗೆಗಳವಂತೆ ಆಟು ಸೀಮ್ರಂತ್ಕೆ. ಹುಸಾರ್ಲೆ' ತಾಯಿ ಮಗ ಇಬ್ಬರನ್ನೂ ಏಕ ಕಾಲದಲ್ಲಿ ಸುಟ್ಟುಬಿಡೋನಂತೆ ನೋಡಿದ. ಮಾದನೆಂಬ ಯಃಕಶ್ಚಿತ್ ಹುಡುಗನೊಬ್ಬ ಇಡೀ ಊರೆಂಬ ಊರು ಜನರ ಬಾಯಿಗೆ ಬೀಳೋವಂತ ಘಟನೆಯೊಂದು ಜರುಗಿತು. ಮಾದನ ದೇವತಾ ವಿಗ್ರಹಗಳನ್ನು ಅಸೂಯೆಯಿಂದ ನೋಡಿದ ಉಮೆ ಒಮ್ಮೆ ಅಂದಿದ್ದಳು. 'ಬರೀ ದೇವರ್ನೇ ಕೆತ್ತುತೀಯಲ್ಲಾ ಚೆಂದವಾದ ಮನುಷ್ಯರಾರು ನಿನ್ನ ಕಣ್ಣಿಗೆ ಬೀಳೋಲ್ವೆ?' ಇವನು ತಡಬಡಾಯಿಸಿ ಸುಮ್ಮಗಾಗಿದ್ದನಾದರೂ